ಕರ್ನಾಟಕ ಸರ್ಕಾರ

**GOVERNMENT OF KARNATAKA**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯಪಡೆ ಮುಖ್ಯಸ್ಥರು)ರವರ ಕಛೇರಿ
Office of
Principal Chief Conservator of Forests
(Head of Forest Force)

ಅರಣ್ಯ ಭವನ, 18 ನೇ ಅಡ್ಡರಸ್ತೆ,
ಮಲ್ಲೇಶ್ವರಂ, ಬೆಂಗಳೂರು- 560003
Aranya Bhavan, 18th Cross
Malleshwaram, Bengaluru-560 003
Telephone : 080 2334 6472
Email : apccffc@gmail.com

Old File No.A5(6)/GFL/CR-04/2015-16 **E-63224**
E-office File No. KFD/HOFF/A5-6(GFL)/6/2018-FC ದಿನಾಂಕ: 13-01-2021
Encl:........Pages

ಇವರಿಗೆ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
ಬಹುಮಹಡಿಗಳ ಕಟ್ಟಡ, ಬೆಂಗಳೂರು – 560 001

ಮಾನ್ಯರೇ,

ವಿಷಯ: Diversion of 4.4188 hectare of forest land in respect of implementation of Bharachukki 2 x 2.5 MW Mini Hydel Electric Scheme across Cauvery river on the left bank of Bharachukki falls downstreams, near Shivanasamudra Village, Palya Hobli, Kollegal Taluk, Chamarajanagar District in favour of M/s Madhyaranga Energy Private Limited, Bengaluru
**Proposal No. FP/KA/HYD/14621/2015 [FORM-A]**

ಉಲ್ಲೇಖ:

1. ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ. ಅಪಜೀ 05 ಎಫ್.ಎಲ್.ಎಲ್ 2018 ದಿನಾಂಕ 15-02-2018 *[offline query]*, 10-10-2018 *[offline query]*, 29-01-2020 *[communication of letter dated 15-02-2018 as EDS query]* ಮತ್ತು 01-02-2020 *[offline query]*
2. ಈ ಕಛೇರಿಯ ಇದೇ ಸಂಖ್ಯೆ ಪತ್ರ ದಿನಾಂಕ 14-03-2018 *[communication of GOK letter dated 15-02-2018 in offline mode]*, 20-11-2018 *[reminder]*, 03-01-2020 *[offline]* ಮತ್ತು 19-03-2020 *[communication of this office letter dated 03-01-2020]*
3. ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಲೈ ಮಹದೇಶ್ವರ ವನ್ಯಜೀವಿ ವಿಭಾಗ ಕೊಳ್ಳೇಗಾಲ ಇವರ ಪತ್ರ ಸಂಖ್ಯೆ. ಬಿ2/ಲ್ಯಾಂಡ್/ಎಂ.ಇ.ಪಿ.ಎಲ್/ಸಿಆರ್-02/2015-16/1461 ದಿನಾಂಕ 30-01-2020 *[offline reply to EDS query]* ಮತ್ತು 25-09-2020 *[online reply to EDS query]*
4. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾದೇಶಿಕ), ಚಾಮರಾಜನಗರ ಇವರ ಪತ್ರ ಸಂಖ್ಯೆ. ಸಿ1/ಲ್ಯಾಂಡ್/ಮಿನಿ ಹೈಡಲ್ ಪ್ರಾಜೆಕ್ಟ್/2019-20 ದಿನಾಂಕ 12-03-2020 *[offline reply to EDS query]* ಮತ್ತು 13-11-2020 *[online remarks as reply to EDS query]*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರವು ಉಲ್ಲೇಖ (1)ರ ಪತ್ರಗಳಲ್ಲಿ ಪ್ರಸ್ತಾಪಿತ ಯೋಜನೆಯ ಅರಣ್ಯ ಪ್ರದೇಶದಲ್ಲಿ ರಾಜ್ಯ ಸರ್ಕಾರದ ಅಂಗ ಸಂಸ್ಥೆಯಾದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಅಥವಾ ಕ್ರೆಡಿಲ್ ಅಥವಾ ಇನ್ನಾವುದಾದರೂ ಸಂಸ್ಥೆಯು ಈಗಾಗಲೇ ಕಾರ್ಯ ನಿರ್ವಹಿಸುತ್ತಿದೆಯೇ? ಅಥವಾ ಯೋಜನೆಗೆ ಅರಣ್ಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ ಎಂಬ ಬಗ್ಗೆ ವರದಿ ನೀಡಲು ತಿಳಿಸಿರುತ್ತದೆ. ಇದರನ್ವಯ

ಉಲ್ಲೇಖ (2)ರ ಈ ಕಛೇರಿಯ ಪತ್ರಗಳಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರಿಗೆ ವರದಿಯನ್ನು ನೀಡಲು ಸೂಚಿಸಲಾಗಿತ್ತು.

ಇದಕ್ಕುತ್ತರವಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರು ಉಲ್ಲೇಖ (3)ರ ಮೂಲಕ ವರದಿಯನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾದೇಶಿಕ), ಚಾಮರಾಜನಗರ ಇವರಿಗೆ ಸಲ್ಲಿಸಿರುತ್ತಾರೆ. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾದೇಶಿಕ), ಚಾಮರಾಜನಗರ ಇವರು ಉಲ್ಲೇಖಿತ (4)ರ ಮೂಲಕ ಈ ಕೆಳಗಿನಂತೆ ವರದಿಯನ್ನು ಸಲ್ಲಿಸಿರುತ್ತಾರೆ.

"ಮಧ್ಯರಂಗ ಎನರ್ಜಿ ಪ್ರೈವೇಟ್ ಲಿಮಿಟೆಡ್ ಇವರು ಸ್ಥಾಪಿಸಲು ಉದ್ದೇಶಿರುವ ಭರಚುಕ್ಕಿ ಮಿನಿ ಹೈಡ್ರೋ ಪ್ರಾಜೆಕ್ಟ್‌ಗೆ ಟ್ರಾನ್ಸ್ ಮಿಷನ್ ಲೈನ್ ಅಳವಡಿಸಲು ಉದ್ದೇಶಿಸಿರುವ ಪ್ರದೇಶದ ಸುತ್ತಲೂ ಕಿರು ವಿದ್ಯುತ್ ಸ್ಥಾವರಗಳಾದ *(1)* ಪಯನೀರ್ ಜೆಂಕೋ ಲಿಮಿಟೆಡ್, *(2)* ಪಯನೀರ್ ಪವರ್ ಕಾರ್ಪೋರೇಷನ್ ಲಿಮಿಟೆಡ್ ಮತ್ತು *(3)* ಶಿವನಸಮುದ್ರ ಜಲ ವಿದ್ಯುತ್ ಉತ್ಪಾದನೆ ಕೇಂದ್ರ *(ಮೆ// ಕರ್ನಾಟಕ ಪವರ್ ಕಾರ್ಪೋರೇಷನ್ ಲಿಮಿಟೆಡ್)* ಗಳಿದ್ದು ಹಾಗೂ ಪ್ರಸ್ತಾಪಿತ ಸ್ಥಳದಲ್ಲಿ ಈ ಪ್ರಕರಣಗಳನ್ನು ಹೊರತುಪಡಿಸಿ ಇತರೆ ಹೊಸ ಯೋಜನೆಗೆ ಯಾವುದೇ ಪ್ರಸ್ತಾವನೆ ಸಲ್ಲಿಕೆಯಾಗಿರುವುದಿಲ್ಲ."

ಮುಂದುವರೆದು, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾದೇಶಿಕ), ಚಾಮರಾಜನಗರ ಇವರು ಕೊಳ್ಳೇಗಾಲ ಬಫರ್ ವಲಯದ ವ್ಯಾಪ್ತಿಯ ಸರ್ವೆ ನಂ.1 ರ ಅರಣ್ಯ ಪ್ರದೇಶದಲ್ಲಿ ಮಧ್ಯರಂಗ ಎನರ್ಜಿ ಪ್ರೈವೇಟ್ ಲಿಮಿಟೆಡ್ ಇವರು ಸ್ಥಾಪಿಸಲು ಉದ್ದೇಶಿರುವ ಪ್ರದೇಶವು ನಡುಗಡ್ಡೆಯಾಗಿದ್ದು, ಸದರಿ ಪ್ರದೇಶವು ಕಾವೇರಿ ವನ್ಯಜೀವಿ ವಿಭಾಗದ ಎಕೋ ಸೆನ್ಸಿಟೀವ್ ಜೋನ್ ಪ್ರದೇಶವಾಗಿದ್ದು, ಪರಿಸರ ಸೂಕ್ಷ್ಮ ವಲಯದಲ್ಲಿ ಯಾವುದೇ ಜಲವಿದ್ಯುತ್ ಯೋಜನೆಯನ್ನು ಸ್ಥಾಪಿಸುವುದನ್ನು ನಿಷೇದಿಸಲಾಗಿದೆಯಾದ್ದರಿಂದ, ಸದರಿ ಸ್ಥಾವರವನ್ನು ಸ್ಥಾಪಿಸುವುದು ಸೂಕ್ತವಲ್ಲವೆಂಬ ಅಭಿಪ್ರಾಯವನ್ನು ಸಹ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ವರದಿ ಮಾಡಿರುತ್ತಾರೆ ಎಂಬ ಅಂಶವನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆಯೆಂದು ವರದಿ ಸಲ್ಲಿಸಿರುತ್ತಾರೆ.

ಆದುದರಿಂದ, ರಾಜ್ಯ ಸರ್ಕಾರವು ಕೇಳಿರುವ ಮಾಹಿತಿಯನ್ನು ಈ ಮೇಲಿನಂತೆ ಸಲ್ಲಿಸುತ್ತಾ, ಉಲ್ಲೇಖಿತ **(3)** ಮತ್ತು **(4)**ರ ವರದಿಗಳಂತೆ ಪ್ರಸ್ತಾಪಿತ ಜಲ ವಿದ್ಯುತ್ ಯೋಜನೆಯಿಂದ ವನ್ಯಪ್ರಾಣಿಗಳಿಗೆ**,** ಅರಣ್ಯ ಪ್ರದೇಶದ ಪರಿಸರ ಸೂಕ್ಷ್ಮ ವಲಯಕ್ಕೆ ಹೆಚ್ಚಾಗಿ ಹಾನಿಯುಂಟಾಗುವ ಸಂಭವವಿರುವುದರಿಂದ ಈ ಪ್ರಸ್ತಾವನೆಯನ್ನು ತಿರಸ್ಕರಿಸಲು ಮತ್ತೊಮ್ಮೆ ಕೋರಲಾಗಿದೆ.

ಉಲ್ಲೇಖ (3) ಮತ್ತು (4)ರ ವರದಿಗಳ ಪ್ರತಿಗಳೊಂದಿಗೆ ಪ್ರಸ್ತಾವನೆಯ ಪ್ರಸ್ತುತ ಹಂತದ ಮಾಹಿತಿಯನ್ನು ಎಫ್ ಸಿ ವೆಬ್ ಪೋರ್ಟಲ್ ನಿಂದ ಪಡೆದು ಈ ಪತ್ರಕ್ಕೆ ಲಗತ್ತಿಸಿದೆ.

ತಮ್ಮ ನಂಬುಗೆಯ

(ಸಂಜಯ್ ಮೋಹನ್, ಭಾ.ಅ.ಸೇ.,)
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯಪಡೆ ಮುಖ್ಯಸ್ಥರು)

ಪ್ರತಿಯನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಚಾಮರಾಜನಗರ ವೃತ್ತ, ಚಾಮರಾಜನಗರ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಲೈ ಮಹದೇಶ್ವರ ವನ್ಯಜೀವಿ ವಿಭಾಗ ಕೊಳ್ಳೇಗಾಲ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.